ಹುದ್ದೆಗಳನ್ನು ಭರ್ತಿಮಾಡುವ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡುವ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಅನುದಾನಿತ ಪ್ರೌಢ ಶಾಲೆಗಳಲ್ಲಿ ಹುದ್ದೆಗಳು ಖಾಲಿ ಇರುವುದಿಲ್ಲ. ಅನುದಾನಿತ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಮಿತವ್ಯಯ ಸಡಿಲಿಸಿದ್ದು, ಮೀಸಲಾತಿ ಮತ್ತು ನೇಮಕಾತಿ ನಿಯಮಾನುಸಾರ ಅನುಮತಿ ಪಡೆದು ಸದರಿ ಹುದ್ದೆಗಳನ್ನು ಭರ್ತಿಮಾಡಿಕೊಂಡಿದ್ದಲ್ಲಿ, ಇಲಾಖೆಯಿಂದ ಅನುಮೋದನೆ ನೀಡಲಾಗುತ್ತದೆ.

ಖಾಸಗೀ ವೈದ್ಯಕೀಯ ಕಾಲೇಜುಗಳಿಂದ ಸರ್ಕಾರಕ್ಕೆ ಕ್ಲಿನಿಕ್ ಶುಲ್ಕ ಬಾಕಿ.

888 - ಶ್ರೀ ಎನ್. ಕೃಷ್ಣಪ್ಪ (ಬನ್ನೂರು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಖಾಸಗೀ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಸರ್ಕಾರಕ್ಕೆ ಕ್ಲಿನಿಕಲ್ ಶುಲ್ಕ ಬಾಕಿ ನೀಡಬೇಕಾದ ಖಾಸಗಿ ವೈದ್ಯಕೀಯ ಕಾಲೇಜುಗಳಾವುವು?

ಇ) ಬಾಕಿ ಬರಬೇಕಾದ ಮೊತ್ತವೆಷ್ಟು? (ಕಾಲೇಜುವಾರು ವಿವರನೀಡುವುದು)

ಈ) ಬಾಕಿ ಇರತಕ್ಕ ಹಣವನ್ನು ವಸೂಲು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ಬಾಕಿ ಪಾವತಿ ಮಾಡದೇ ಇರತಕ್ಕ ಕಾಲೇಜುಗಳಿಗೆ ಸರ್ಕಾರದ ಆಸ್ಪತ್ರೆಯ ಸೌಲಭ್ಯ ನಿಲ್ಲಿಸಲು ಸರ್ಕಾರ ಉದ್ದೇಶಿಸಿದೆಯೇ?

ಊ) ಹಾಗಿದ್ದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುವುದಿಲ್ಲವೇ?

ಋ) ಈ ರೀತಿ ವಸೂಲಾದ ಶುಲ್ಕದ ಹಣವನ್ನು ಆಯಾ ಸರ್ಕಾರಿ ಆಸ್ಪತ್ರೆಗಳ ಅಭಿವೃದ್ಧಿಗಾಗಿಯೇ ಖರ್ಚು ಮಾಡಲಾಗುವುದೇ? ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು.

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿರುವ ಖಾಸಗೀ ವೈದ್ಯಕೀಯ ಕಾಲೇಜುಗಳು 14

ಆ) ಕ್ಲಿನಿಕಲ್ ಶುಲ್ಕ ಬಾಕಿ ನೀಡಬೇಕಾದ ಖಾಸಗೀ ವೈದ್ಯಕೀಯ ಕಾಲೇಜುಗಳ ವಿವರದ ಪಟ್ಟಿ ಲಗತ್ತಿಸಿದೆ.

ಇ) ಬಾಕಿ ಬರಬೇಕಾದ ಮೊತ್ತ ರೂ. 70,95,682.00 (ಕಾಲೇಜುವಾರು ವಿವರದ ಪಟ್ಟಿ ಲಗತ್ತಿಸಿದೆ.)

ಈ) ಪಾವತಿ ಮಾಡಬೇಕಾದ ಕ್ಲಿನಿಕಲ್ ಶುಲ್ಕವನ್ನು ಪಾವತಿಸಿ ವರದಿಯನ್ನು ಕಳುಹಿಸುವಂತೆ ಸಂಬಂಧಿಸಿದ ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರಿಗೆ ಹಾಗೂ ಸರ್ಕಾರಿ ಆಸ್ಪತ್ರೆಯ ಅಧೀಕ್ಷಕರು: ಜಿಲ್ಲಾ ಶಸ್ತ್ರ ಚಿಕಿತ್ಸಕರುಗಳಿಗೆ ಸೂಚನೆಯನ್ನು ನೀಡಲಾಗಿದೆ.

ಅನುಬಂಧ

ಖಾಸಗೀ ವೈದ್ಯಕೀಯ ಕಾಲೇಜಿನಿಂದ ಬಾಕಿ ಬರಬೇಕಾದ ಕ್ಲಿನಿಕಲ್ ಶುಲ್ಕದ ವಿವರಗಳು

ಕ್ರ. ಸಂ.	ವೈದ್ಯಕೀಯ ಕಾಲೇಜಿನ ಹೆಸರು	ಬಾಕಿ ಶುಲ್ಕ (ರೂ.)	ಷರಾ
1)	ಕೆಂಪೇಗೌಡ ವೈದ್ಯಕೀಯ ವಿದ್ಯಾಸಂಸ್ಥೆ ಬೆಂಗಳೂರು	66,250-00	ಈ ಬಾಕಿಯು 1-7-94 ರವರೆಗೆ ಆಗಿರುತ್ತದೆ. ಮತ್ತು 1-7-94ರಿಂದ 30-6-95ರವರೆಗಿನ ಅವಧಿಗೆ ಸಂಬಂಧಿಸಿದ ಕ್ಲಿನಿಕಲ್ ಶುಲ್ಕದ ವಸೂಲಾತಿ ಬಗ್ಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
2)	ಡಾ. ಆರ್. ಅಂಬೇಡ್ಕರ್ ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು	16,60,182-00	ದಿನಾಂಕ 1-7-1995ರಲ್ಲಿ ಇದ್ದಂತೆ
3)	ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	6,83,000-00	ಈ ಬಾಕಿಯು 1-1-94ರವರೆಗೆ ಆಗಿರುತ್ತದೆ. 1-1-94ರ ನಂತರ ಅವಧಿಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
4)	ಶ್ರೀ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳ್ಳೂರು.	-ಇಲ್ಲ-	1-1-94ರ ನಂತರದ ಅವಧಿಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
5)	ಶ್ರೀ ದೇವರಾಜ ಅರಸ್ ವೈದ್ಯಕೀಯ ವಿದ್ಯಾಲಯ, ಕೋಲಾರ	-ಇಲ್ಲ-	—
6)	ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	22,05,000-00	ಈ ಬಾಕಿಯು 1-1-94 ರವರೆಗೆ ಆಗಿರುತ್ತದೆ. 1-1-94ರ ನಂತರದ ಅವಧಿಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
7)	ಜೆ.ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	20,82,500-00	ದಿನಾಂಕ 1-7-1994ರಲ್ಲಿ ಇದ್ದಂತೆ
8)	ಎಂ.ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗಾ	3,98,750-00	ದಿನಾಂಕ 1-7-95ರಲ್ಲಿ ಇದ್ದಂತೆ
9)	ಅಲ್ ಅಮೀನ್ ಮೆಡಿಕಲ್ ಕಾಲೇಜು, ಬಿಜಾಪುರ	-ಇಲ್ಲ-	ದಿನಾಂಕ 1-7-94ರ ನಂತರದ ಅವಧಿಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
10)	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು	-ಇಲ್ಲ-	ದಿನಾಂಕ 1-7-95ರಂದು ಯಾವುದೇ ಬಾಕಿ ಇರುವುದಿಲ್ಲ.

ಊ) ಎಲ್ಲಾ ಖಾಸಗೀ ಕಾಲೇಜುಗಳು ನೀಡಬೇಕಾದ ಕ್ಲಿನಿಕಲ್ ಶುಲ್ಕದ ಮೊತ್ತದಲ್ಲಿ ಕೆಲ ಭಾಗಾಂಶ ಈಗಾಗಲೇ ಪಾವತಿ ಮಾಡಿರುತ್ತಾರೆ. ಅಂತೆಯೇ ಎಲ್ಲಾ ಖಾಸಗೀ ಕಾಲೇಜುಗಳಿಗೆ ಬಾಕಿ ಇರುವ ಕ್ಲಿನಿಕಲ್ ಶುಲ್ಕವನ್ನು ಪಾವತಿ ಮಾಡಲು 2-3 ತಿಂಗಳ ಗಡುವು ನೀಡಲಾಗಿದೆ. ಈ ಅವಧಿಯೊಳಗೆ ಪಾವತಿ ಮಾಡದಿದ್ದರೆ ಕ್ಲಿನಿಕಲ್ ಸೌಲಭ್ಯವನ್ನು ನಿಲ್ಲಿಸುವ ಬಗ್ಗೆ ಸೂಚನೆ ನೀಡಲಾಗಿದೆ.

ಋ) ಈಗಾಗಲೇ ಎಲ್ಲಾ ಖಾಸಗೀ ಕಾಲೇಜುಗಳು ಹಂತ ಹಂತವಾಗಿ ಕ್ಲಿನಿಕಲ್ ಶುಲ್ಕವನ್ನು ಪಾವತಿ ಮಾಡುತ್ತಿರುವುದರಿಂದ ಬಾಕಿ ಕ್ಲಿನಿಕಲ್ ಶುಲ್ಕವನ್ನು ಸಂಪೂರ್ಣವಾಗಿ ವಸೂಲು ಮಾಡವ ಬಗ್ಗೆಕ್ರಮ ಕೈಗೊಳ್ಳಲಾಗುತ್ತಿದೆ. ಆದ ಕಾರಣ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕ್ಲಿನಿಕಲ್ ಸೌಲಭ್ಯವನ್ನು ನಿಲ್ಲಿಸಿರುವುದಿಲ್ಲ.

ಋ) ವಸೂಲು ಮಾಡಲಾದ ಕ್ಲಿನಿಕಲ್ ಶುಲ್ಕವನ್ನು ಆಯಾ ಸರ್ಕಾರಿ ಆಸ್ಪತ್ರೆಯ ಅಭಿವೃದ್ಧಿಗಾಗಿ ಉಪಯೋಗಿಸಲಾಗುವುದು.

1994-95ನೇ ಸಾಲಿನಲ್ಲಿ ಕ್ಲಿನಿಕಲ್ ಶುಲ್ಕವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲಾದ ವಿವರ

	ಶುಲ್ಕ ಪಡೆದ ಆಸ್ಪತ್ರೆ ಹೆಸರು	*ಮಂಜೂರಾದ ಮೊತ್ತ ರೂ.*	*ವಿವರ*
1)	ಜಿಲ್ಲಾ ಆಸ್ಪತ್ರೆ ಗುಲ್ಬರ್ಗಾ	8,98,000.00	ಉಪಕರಣ ಖರೀದಿಗಾಗಿ
		3,80,000.00	ನೀರು ಸರಬರಾಜಿಗಾಗಿ
		6,50,000.00	ಕಟ್ಟಡ ವಿದ್ಯುಧೀಕರಣಕ್ಕಾಗಿ
2)	ಜಿಲ್ಲಾ ಆಸ್ಪತ್ರೆ, ಬೆಳಗಾಂ	11,44,000.00	ಉಪಕರಣ ಖರೀಧಿಗಾಗಿ
3)	ಜಿಲ್ಲಾ ಆಸ್ಪತ್ರೆ, ಬಿಜಾಪುರ	65,000.00	ಕಟ್ಟಡ ದುರಸ್ತಿಗಾಗಿ
4)	ಸಿ.ಜಿ. ಆಸ್ಪತ್ರೆ, ದಾವಣಗೆರೆ	9,26,000.00	ಉಪಕರಣ ಖರೀದಿಗಾಗಿ
		22,000.00	ಜನರೇಟರ್‌ಗಾಗಿ
5)	ಕೆ.ಜಿ.ಎಫ್. ಜಿಲ್ಲಾ ಆಸ್ಪತ್ರೆ	9,900.00	ಜನರೇಟರ್‌ಗಾಗಿ
6)	ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು	2,36,000.00	ಉಪಕರಣ ಖರೀದಿಗಾಗಿ

1995-96ನೇ ಸಾಲಿಗೆ ಸಂಬಂಧಪಟ್ಟ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಂದ ಆಸ್ಪತ್ರೆಗಳಿಗೆ ಅಗತ್ಯವಿರುವ ಯಂತ್ರೋಪಕರಣಗಳ ಮತ್ತು ಇತರೆ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾಹಿತಿ ಕೋರಲಾಗಿದ್ದು, ಬೇಡಿಕೆಗನುಸಾರವಾಗಿ ಕ್ಲಿನಿಕಲ್ ಶುಲ್ಕವನ್ನು ಉಪಯೋಗಿಸಲಾಗುವುದು.

Budget Provision to Adult Education Department for the year 1995-96.

889 - Sri S. Krishnappa (Banur) : Will the Minister for Primary & Secondary Edn. be pleased to state?

a) *What is the Budget provision made to the Adult Education Department for the year 1995-96;*

b) *How many people have been imparted education from the Adult Education department during 1994-95;*

c) *Whether it has come to the notice of the Government that this department is not functioning properly;*

d) *What are the measures taken by the Government to improve the functioning of this department;*

e) *Amount received from the Government of India during 1994-95 for the programmes of this department;*

f) *What are the programmes undertaken by the department during 1995-96 in T.Narsipur Taluk.*

Sri Govinda Gowda (Minister for Primary & Secondary Edn) :

a) Rs.800.88 Lakhs

b) Totally 11,36 lakhs people.

c) No.

d) Does not arise.

e)

		Rs.
For literacy programmes	-	754.75 lakhs
For post literacy programmes	-	626.82 lakhs

f) Literacy programme has been completed. Evaluation process has been started.

Programmes are being chalked out to protect the beneficiaries from illiteracy.